CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.608/2019

| | |
|---|---|
| ಸಾಕ್ಷಿದಾರರ ಹೆಸರು | ಶಿವಕುಮಾರ್ |
| ತಂದೆಯ ಹೆಸರು | ಚಿಕ್ಕಿರೇಗೌಡ |
| ವಯಸ್ಸು | 51 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ತಗಡೇಗೌಡನದೊಡ್ಡಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 23.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರನ್ನು ನೋಡಿರುತ್ತೇನೆ. ಅವರ ಪರಿಚಯ ಇರುತ್ತದೆ. ಚಾಸಾ-2 ನನ್ನ ತಂದೆ, ಚಾಸಾ-3 ರಿಂದ 6 ರವರ ಪರಿಚಯ ಇದೆ.

ದಿಃ16.07.2018 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ 1 ರಿಂದ 4ನೇ ಆರೋಪಿತರು ನಮ್ಮ ಜಮೀನಿನಲ್ಲಿ ಟ್ರಾಕ್ಟರ್ ಮೂಲಕ ಉಳುಮೆ ಮಾಡುತ್ತಿದ್ದರು. ಸದರಿ ಸರ್ವೆ ನಂ.85/4 ಅದು ನಮಗೆ ಸೇರಿದ ಜಮೀನಾಗಿರುತ್ತದೆ. ಆಗ ನಾನು ನಮ್ಮ ಜಮೀನಿನಲ್ಲಿ ಯಾಕೆ ಉಳುಮೆ ಮಾಡುತ್ತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಆರೋಪಿತರು ಗಲಾಟೆ ಮಾಡಿ ನನ್ನನ್ನು ಹೊಡೆದಿರುತ್ತಾರೆ. ಅವರುಗಳು ನನ್ನನ್ನು ಹೊಡೆಯುತ್ತಿದ್ದಾಗ ಚಾಸಾ-2 ರಿಂದ 4 ರವರು ಸ್ಥಳಕ್ಕೆ ಬಂದು ಜಗಳ ಬಿಡಿಸಲು ಪ್ರಯತ್ನ ಮಾಡಿರುತ್ತಾರೆ. ಆ ಸಮಯದಲ್ಲಿ 5 ರಿಂದ 9ನೇ ಆರೋಪಿತರು ಸ್ಥಳಕ್ಕೆ ಬಂದು ಗಲಾಟೆ ಮಾಡಿ ಅವ್ಯಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ ಹೊಡೆದು ಹಾಗೂ ಚಪ್ಪಲಿಯ ಕಾಲಿನಿಂದ ತುಳಿದಿರುತ್ತಾರೆ.

ನಂತರ 3ನೇ ಆರೋಪಿಯು 2ನೇ ಆರೋಪಿಯ ಕೈಯಲ್ಲಿದ್ದ ದೊಣ್ಣೆಯನ್ನು ತೆಗೆದುಕೊಂಡು ನನಗೆ ಹಾಗೂ ಚಾಸಾ-2 ರವರಿಗೆ ಹೊಡೆದು ನೋವುಂಟು ಮಾಡಿರುತ್ತಾರೆ. ನಂತರ ನಾವು ಕನಕಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೆವೆ. ನಂತರ ಗ್ರಾಮಸ್ಥರ ಮುಖಾಂತರ ತೀರ್ಮಾನ ಪಡಿಸಿಕೊಳ್ಳಬೇಕೆಂಬ ಕಾರಣಕ್ಕೆ ಸುಮ್ಮನಿದ್ದೇವು. ದಿಃ04.08.2018 ರಂದು ನಾವು ದೂರನ್ನು ಕೊಟ್ಟಿರುತ್ತೇವೆ. ನಾನು ಈ ಸಂಬಂಧ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ದೂರನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ 2 ದೊಣ್ಣೆಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ನಮ್ಮದು ಹಾಗೂ ಆರೋಪಿತರ ಜಮೀನು ಅಕ್ಕಪಕ್ಕದಲ್ಲಿದೆ ಎಂದರೆ ಸರಿ. ನಮ್ಮ ಜಮೀನಿನ ಪೂರ್ವಕ್ಕೆ ಆರೋಪಿತರ ಜಮೀನು ಇದೆ ಎಂದರೆ ಸರಿ. ನನ್ನ ಜಮೀನಿನ ಸರ್ವೆ ನಂ.85/4 ಎಂದರೆ ಸರಿ. ಆರೋಪಿತರ ಜಮೀನಿನ ಸರ್ವೆ ನಂ.82 ಎಂದರೆ ಸರಿ. ನಮ್ಮ ಹಾಗೂ ಆರೋಪಿತರ ಜಮೀನಿನ ಮಧ್ಯೆ ಸರ್ಕಾರಿ ತೆವರಿ ಇದೆ ಎಂದರೆ ಸರಿ. ನಮಗೂ ಮತ್ತು ಆರೋಪಿಗಳಿಗೆ ಜಮೀನಿಗೆ ಓಡಾಡುವ ಸಂಬಂಧ ಆಗಿ ಬರುತ್ತಿಲ್ಲ ಎಂದರೆ ಸರಿ. ಆರೋಪಿತರ ಜಮೀನಿನಲ್ಲಿ ಯಾವುದೇ ನಕಾಶೆ ರಸ್ತೆ ಇಲ್ಲ ಎಂದರೆ ಸಾಕ್ಷಿಯು ಸರ್ಕಾರಿ ರಸ್ತೆ ಇದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿಗೆ ತಗಡೇಗೌಡನದೊಡ್ಡಿ ಕಡೆಯಿಂದ ಬರಲು ನಕಾಶೆ ರಸ್ತೆ ಇದೆ ಎಂದರೆ ಸರಿಯಲ್ಲ.

ನಮಗೆ ಈ ರೀತಿ ರಸ್ತೆ ಇದ್ದರೂ ಸಹಿತ ಆರೋಪಿತರ ಜಮೀನಿನ ಮೇಲೆ ರಸ್ತೆ ಮಾಡಲು ಪ್ರಯತ್ನ ಮಾಡಿರುತ್ತೇನೆಂದರೆ ಸರಿಯಲ್ಲ. ಈ ರೀತಿ ನಾವು ಆರೋಪಿತರ ಜಮೀನಿನ ಮೇಲೆ ರಸ್ತೆ ಮಾಡಲು

ಪ್ರಯತ್ನ ಮಾಡಿದಾಗ ಸದರಿ ಆರೋಪಿತರು ಅದನ್ನು ತಡೆದಿರುತ್ತಾರೆಂದರೆ ಸರಿಯಲ್ಲ. ಈ ರೀತಿ ಅಕ್ರಮವಾಗಿ ರಸ್ತೆ ಮಾಡಲು ಪ್ರಯತ್ನ ಮಾಡಿದ ಕಾರಣ ನಮಗೂ ಆರೋಪಿತರಿಗೂ ಆಗಿ ಬರುತ್ತಿಲ್ಲ ಎಂದರೆ ಸಾಕ್ಷಿಯು ಅವರು ನಮ್ಮ ಜಮೀನಿನಲ್ಲಿ ಉಳುಮೆ ಮಾಡಿದ ಕಾರಣ ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನಾನು ಹೇಳಿದಂತೆ ನಮ್ಮ ಜಮೀನಿನಲ್ಲಿ ಟ್ರಾಕ್ಟರ್ ತಂದು ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಈ ಗಲಾಟೆಯ ಸಂದರ್ಭದಲ್ಲಿ ಚಾಸಾ-2 ರಿಂದ 4 ಹಾಗೂ ಆರೋಪಿತರೆಲ್ಲರೂ ಹಾಜರಿದ್ದರು. ದೊಣ್ಣೆಯಿಂದ 2ನೇ ಆರೋಪಿ ನನಗೆ ಹೊಡೆದಿರುತ್ತಾರೆ. 3ನೇ ಆರೋಪಿ ದೊಣ್ಣೆಯಿಂದ ಚಾಸಾ-2 ರವರ ಬೆನ್ನು ಹಾಗೂ ಸೊಂಟಕ್ಕೆ ಹೊಡೆದಿರುತ್ತರೆ. ನನಗೆ ಎಡಗೈ ಮತ್ತು ಮುಂಗೈಗೆ 2ನೇ ಆರೋಪಿ ದೊಣ್ಣೆಯಿಂದ ಹೊಡೆದಿರುತ್ತಾರೆ. ಆರೋಪಿತರು ಎಲ್ಲರೂ ಸೇರಿಕೊಂಡು ನನಗೆ, ಚಾಸಾ-2 ಮತ್ತು 3 ರವರಿಗೆ ಎಲ್ಲರಿಗೂ ಕೈ ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆ. ನಾನು ಕೊಟ್ಟ ದೂರಿನಲ್ಲಿ ಯಾರು ಯಾರಿಗೆ ಹೊಡೆದಿರುತ್ತಾರೆಂದು ನಿಖರವಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಚಪ್ಪಲಿಯ ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತಾರೆ.

ಆರೋಪಿತರು ನಾನು ಹೇಳಿರುವಂತೆ ನಮ್ಮ ಮೇಲೆ ಜಗಳ ಮಾಡಿರುವುದಿಲ್ಲ ಹಾಗೂ ನನಗೆ ಮತ್ತು ಚಾಸಾ-2 ರಿಂದ 4 ರವರಿಗೆ ಹೊಡೆದು ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಆರೋಪಿತರ ಜಮೀನಿನಲ್ಲಿ ರಸ್ತೆ ಮಾಡಲು ಬಿಡದೇ ಇರುವ ಕಾರಣ ಈ ರೀತಿ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿಃ16.07.2018ರಂದು ಸಂಜೆ ಸಮಯದಲ್ಲಿ ನಾವು ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಸಮಯ ನೆನಪಿಲ್ಲ. ನಾವು ಆಸ್ಪತ್ರೆಗೆ ಹೋಗಿ ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಆರೋಪಿತರು ನಮಗೆ ಯಾವುದೇ ಗಾಯವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾವು 18ದಿನ ತಡವಾಗಿ ಹೋಗಿ ದೂರನ್ನು ಕೊಟ್ಟಿರುತ್ತೇವೆಂದರೆ ಸರಿ. ಆರೋಪಿತರು ನಮಗೆ ಯಾವುದೇ ತೊಂದರೆ ಮಾಡಲಿಲ್ಲ ಆದ್ದರಿಂದ ನಾವು ಕೂಡಲೇ ದೂರನ್ನು ಕೊಟ್ಟಿಲ್ಲ ಎಂದರೆ ಗ್ರಾಮಸ್ಥರ ಮುಖಾಂತರ

ಬಗೆಹರಿಸಿಕೊಳ್ಳುವ ಯೋಚನೆ ಮಾಡಿ ತಡವಾಗಿ ದೂರನ್ನು ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಕೇವಲ ಈ ಸುಳ್ಳು ದೂರನ್ನು ಕೊಟ್ಟರೆ ಆರೋಪಿತರು ಹೆದರಿಕೊಂಡು ತಮ್ಮ ಜಮೀನಿನಲ್ಲಿ ದಾರಿ ಬಿಡುತ್ತಾರೆಂದು ಈ ರೀತಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಬಟ್ಟೆಗಳು ರಕ್ತಕಲೆಯಾಗಿತ್ತು ಎಂದು ಹೇಳಿರುತ್ತೇನೆಂದರೆ ಸಾಕ್ಷಿಯು ನಮಗೆ ಗಾಯಗಳಾಗಿರುತ್ತವೆ ಆದರೆ ರಕ್ತಕಲೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಮು.ಮ-1 ಮತ್ತು 2 ಸಾಮಾನ್ಯವಾಗಿ ಊರುಗಳಲ್ಲಿ ಎಲ್ಲಾ ಕಡೆ ಸಿಗುತ್ತವೆಂದರೆ ಸರಿ. ಆರೋಪಿತರು ಹೊಡೆದ ಸ್ಥಳದಲ್ಲಿ ಸದರಿ ದೊಣ್ಣೆಗಳು ಸಿಕ್ಕಿರುತ್ತವೆ. ಸ್ಥಳದಲ್ಲಿ ಈ ರೀತಿ ಯಾವುದೇ ದೊಣ್ಣೆಗಳು ಇರಲಿಲ್ಲ ಅದನ್ನು ಕೇವಲ ಪ್ರಕರಣಕ್ಕೆ ಅನುಕೂಲವಾಗುವ ರೀತಿ ನಾನೇ ಠಾಣೆಗೆ ಹೋಗಿ ಕೊಟ್ಟಿರುತೆತೇನೆಂದರೆ ಸರಿಯಲ್ಲ. ಆರೋಪಿತರು ದೊಣ್ಣೆಯಿಂದ ನನಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರು ಸಹಿತ ಅವರ ವಿರುದ್ದ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಕೇವಲ ದೊಣ್ಣೆಯಿಂದ ಹೊಡೆದಿರುವುದಾಗಿ ಹೇಳಿರುತ್ತೇನೆ. ಅದು 3 ಅಡಿ ಇದ್ದು ಅದು ತುರುಬೇವು ಮರದ ದೊಣ್ಣೆಯಾಗಿರುತ್ತದೆ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**